ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 860(851)

ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 20-09-2021

ಉತ್ತರಿಸುವವರು : ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮಾನವ-ವನ್ಯಪ್ರಾಣಿಗಳ ಸಂಘರ್ಷ ತಪ್ಪಿಸಲು ಕೇಂದ್ರ ಸರ್ಕಾರ ರೂಪಿಸಿರುವ ಹಲವಾರು ಯೋಜನೆಗಳನ್ನು ರಾಜ್ಯ ಸರ್ಕಾರ ಅನುಷ್ಠಾನಗೊಳಿಸಲಾಗುತ್ತಿದೆಯೇ; (ಹಾಗಿದ್ದಲ್ಲಿ ಈ ಯೋಜನೆಯ ಪೂರ್ಣ ವಿವರವನ್ನು ಗುರಿ ಮತ್ತು ಸಾಧನೆಯೊಂದಿಗೆ ನೀಡುವುದು)	ಕೇಂದ್ರ ಸರ್ಕಾರವು ರಾಜ್ಯದಲ್ಲಿನ ಮಾನವ-ವನ್ಯಪ್ರಾಣಿಗಳ ಸಂಘರ್ಷ ತಪ್ಪಿಸಲು ಪ್ರತ್ಯೇಕವಾದ ಯೋಜನೆ ರೂಪಿಸಿರುವುದಿಲ್ಲ. ಆದರೆ, ಕೇಂದ್ರ ಸರ್ಕಾರವು ರಾಜ್ಯದಲ್ಲಿನ ಆನೆ, ಹುಲಿ ಮತ್ತು ವನ್ಯಪ್ರಾಣಿಗಳ ರಕ್ಷಣೆ, ಸಂರಕ್ಷಣೆ ಹಾಗೂ ಅವುಗಳ ಆವಾಸ ಸ್ಥಾನಗಳ ಅಭಿವೃದ್ಧಿಗಾಗಿ ಈ ಕೆಳಕಂಡ ಕೇಂದ್ರ ಪುರಸ್ಕೃತ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. 1. ಹುಲಿ ಯೋಜನೆ, 2. ಆನೆ ಯೋಜನೆ ಮತ್ತು 3. ಸಮಗ್ರ ವನ್ಯಜೀವಿ ಆವಾಸಸ್ಥಾನಗಳ ಅಭಿವೃದ್ಧಿ ಸದರಿ ಯೋಜನೆಗಳಡಿ ಕೇಂದ್ರ ಪಾಲು 60% ಮತ್ತು ರಾಜ್ಯ ಪಾಲು 40% ರಂತೆ ಭರಿಸಲು ಕೇಂದ್ರ ಸರ್ಕಾರವು ನಿರ್ದೇಶಿಸಿದೆ. ಅದರಂತೆ ರಾಜ್ಯ ಸರ್ಕಾರವು ಹೊಂದಿಕೆ ಅನುದಾನವನ್ನು ಒದಗಿಸುತ್ತಿದೆ. ಸದರಿ ಯೋಜನೆಗಳಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಪಡೆದ ಆರ್ಥಿಕ ನೆರವು ಮತ್ತು ಸಾಧಿಸಿದ ಪ್ರಗತಿಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಈ ಯೋಜನೆಗಳ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರ ಪಡೆದ ಸಹಾಯ ಧನ, ಆರ್ಥಿಕ ನೆರವು ಮತ್ತು ಇತರ ಸವಲತ್ತುಗಳು ಯಾವುವು; (ಅವುಗಳ ಬಳಕೆ ಮತ್ತು ಸಾಧಿಸಿದ ಪ್ರಗತಿಯ ಪೂರ್ಣ ವಿವರ ನೀಡುವುದು)	
ಇ)	ಮಾನವ-ವನ್ಯಜೀವಿಗಳ ಸಂಘರ್ಷದ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸಿರುವ ಅಧ್ಯಯನಗಳು ಯಾವುವು; (ಅವುಗಳ ವಿವರ ನೀಡುವುದು).	ಕೇಂದ್ರ ಮತ್ತು ರಾಜ್ಯ ಸರ್ಕಾರವು Deutsche Gesellschaft fur Internationale Zusammenarbeit (GIZ) - Indo-German Biodiversity Programme ರವರ ಸಹಭಾಗಿತ್ವದೊಂದಿಗೆ ರಾಜ್ಯದಲ್ಲಿ ಉಪಟಳಕ್ಕೆ ಕಾರಣವಾಗಿರುವ ಕೆಲವೊಂದು ವನ್ಯಪ್ರಾಣಿಗಳಾದ ಆನೆ, ಚಿರತೆ, ಕರಡಿ, ಕಾಡೆಮ್ಮೆ, ಕೃಷ್ಣಮೃಗ, ಕಾಡು ಹಂದಿ ಮತ್ತು ಮೊಸಳೆ ಪ್ರತ್ಯೇಕವಾಗಿ ಮಾನವ-ವನ್ಯಪ್ರಾಣಿ ಸಂಘರ್ಷ ಉಂಟಾಗುವ ಸಂದರ್ಭದಲ್ಲಿ ಕೈಗೊಳ್ಳಬೇಕಿರುವ ಅಗತ್ಯ ಕ್ರಮಗಳ ಬಗ್ಗೆ ಕರಡು ಮಾರ್ಗಸೂಚಿಯನ್ನು ತಯಾರಿಸಲಾಗುತ್ತಿದೆ.

ಈ)	ರಾಜ್ಯ ಸರ್ಕಾರ Light Detection and Ranging (LIDAR) ಆಧಾರಿತ ಅರಣ್ಯ ಸರ್ವೇಯನ್ನು ಕೇಂದ್ರ ಸರ್ಕಾರದ ಯೋಜನೆ ಅಡಿಯಲ್ಲಿ ಕೈಗೊಂಡಿದೆಯೇ; ಹಾಗಿದ್ದಲ್ಲಿ ಈ ಯೋಜನೆಯ ಪೂರ್ಣ ವಿವರ, ಕೇಂದ್ರ ಸರ್ಕಾರ ನೀಡಿದ ಸಹಾಯ ಧನ ಮತ್ತು ಕೈಗೊಂಡ ಸರ್ವೇ ಕಾರ್ಯದ ಸಂಪೂರ್ಣ ವಿವರವನ್ನು ನೀಡುವುದು;	LIDAR Technology ಯನ್ನು ಉಪಯೋಗಿಸಿ ಮಣ್ಣು ಮತ್ತು ಜಲಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲು ಜಮಖಂಡಿ ವಲಯದಲ್ಲಿ 8529.4909 ಹೆಕ್ಟೇರ್ ಪ್ರದೇಶ ಆಯ್ಕೆ ಮಾಡಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ರವರ ಮುಖಾಂತರ The Deputy Inspector General of Forest, Ministry of Environment, Forest and Climate Change, New Delhi ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ದಿನಾಂಕ 08.09.2021 ರಂದು Ministry of Environment, Forest and Climate Change, New Delhi ರವರು ಕಳುಹಿಸಿದ ಸಂಸ್ಥೆಯ ಪ್ರತಿನಿಧಿಗಳು LIDAR Technology ಇರುವ ಹೆಲಿಕಾಪ್ಟರ್ ಮುಖಾಂತರ ಪ್ರಾಥಮಿಕವಾಗಿ ಸ್ಥಳ ಪರಿಶೀಲನೆ ಮಾಡಿರುತ್ತಾರೆ.
ಉ)	LIDAR Technology ಉಪಯೋಗದಿಂದ ವನ್ಯಜೀವಿಗಳಿಗೆ ಅಗತ್ಯವಿರುವ ನೀರು ಮತ್ತು ಮೇವು ಪೂರೈಕೆ ಆಗುವುದಾದರೆ, ಈ Technology ಯನ್ನು ಯಥೇಚ್ಛವಾಗಿ ಬಳಸಿ ಅರಣ್ಯ ಸರ್ವೇಯನ್ನು ಮುಗಿಸಿ ಅಗತ್ಯವಿರುವ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ಮುಂದಾಗುವುದೇ? (ಸಂಪೂರ್ಣ ವಿವರ ನೀಡುವುದು)	LIDAR Technology ಉಪಯೋಗಿಸಿ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳುವುದು ಇನ್ನೂ ಪ್ರಾರಂಭಿಕ ಹಂತದಲ್ಲಿ ಇರುತ್ತದೆ. ಸದರಿ ಯೋಜನೆಯ ಸಂಪೂರ್ಣ ಅನುಷ್ಠಾನದ ನಂತರ, ಅದರ ಫಲಿತಾಂಶದ ಆಧಾರದ ಮೇಲೆ ಈ Technology ಯನ್ನು ಬಳಸುವ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಸಂಖ್ಯೆ: ಅಪಜೀ 183 ಎಫ್‌ಡಬ್ಲ್ಯೂಎಲ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 860 (851)ರ ಅನುಬಂಧ

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಪಡೆದ ಆರ್ಥಿಕ ನೆರವು ಮತ್ತು ಸಾಧಿಸಿದ ಪ್ರಗತಿಯ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಲೆಕ್ಕಶೀರ್ಷಿಕೆ.	2018-19						2019-20						2020-21					
		ಒದಗಿಸಿದ ಅನುದಾನ			ಭರಿಸಿದ ವೆಚ್ಚ			ಒದಗಿಸಿದ ಅನುದಾನ			ಭರಿಸಿದ ವೆಚ್ಚ			ಒದಗಿಸಿದ ಅನುದಾನ			ಭರಿಸಿದ ವೆಚ್ಚ		
		ರಾಜ್ಯ ಪಾಲು	ಕೇಂದ್ರ ಪಾಲು	ಒಟ್ಟು	ರಾಜ್ಯ ಪಾಲು	ಕೇಂದ್ರ ಪಾಲು	ಒಟ್ಟು	ರಾಜ್ಯ ಪಾಲು	ಕೇಂದ್ರ ಪಾಲು	ಒಟ್ಟು	ರಾಜ್ಯ ಪಾಲು	ಕೇಂದ್ರ ಪಾಲು	ಒಟ್ಟು	ರಾಜ್ಯ ಪಾಲು	ಕೇಂದ್ರ ಪಾಲು	ಒಟ್ಟು	ರಾಜ್ಯ ಪಾಲು	ಕೇಂದ್ರ ಪಾಲು	ಒಟ್ಟು
	ಹುಲಿ ಯೋಜನೆ																		
1	2406-02-110-0-02-ಹುಲಿಯೋಜನೆ-139-ಪ್ರಧಾನ ಕಾಮಗಾರಿಗಳು	2,264.59	2,292.53	4,557.12	2,120.04	2,081.56	4,201.60	2,142.04	2,149.45	4,291.49	2,142.04	2,142.34	4,284.38	1,719.97	2,088.24	3,808.21	1,719.97	2,088.23	3,808.201
	2406-02-110-0-02-034-ಹೊರ ಗುತ್ತಿಗೆ	-	-	-	-	-	-	-	-	-	-	-	-	-	-	-	-	-	-
	2406-02-110-0-02-422-ಪರಿಶಿಷ್ಟ ಜಾತಿ ಉಪ ಯೋಜನೆ	-	-	-	-	-	-	-	86.76	86.76	-	86.76	86.76	145.85	172.74	318.59	145.85	172.74	318.590
	2406-02-110-0-02-423-ಗಿರಿಜನ ಉಪ ಯೋಜನೆ	-	-	-	-	-	-	-	82.72	82.72	-	59.47	59.47	162.57	166.36	328.93	162.57	166.36	328.930
	ಒಟ್ಟು :	**2,264.59**	**2,292.53**	**4,557.12**	**2,120.04**	**2,081.56**	**4,201.60**	**2,142.04**	**2,318.93**	**4,460.97**	**2,142.04**	**2,288.57**	**4,430.61**	**2,028.39**	**2,427.34**	**4,455.73**	**2,028.39**	**2,427.33**	**4,455.72**
	ಸಮಗ್ರ ವನ್ಯಜೀವಿ ಆವಾಸಸ್ಥಾನಗಳ ಅಭಿವೃದ್ಧಿ																		
2	2406-02-110-0-47-ಐ.ಡಿ.ಡಬ್ಲ್ಯೂ.ಹೆಚ್.-139-ಪ್ರಧಾನ ಕಾಮಗಾರಿಗಳು	203.22	509.78	713.00	203.22	509.50	712.72	498.34	709.89	1,208.23	365.49	548.23	913.72	321.95	701.05	1,023.00	321.95	699.11	1,021.055
	2406-02-110-0-47-ಐ.ಡಿ.ಡಬ್ಲ್ಯೂ.ಹೆಚ್.- -034-ಹೊರ ಗುತ್ತಿಗೆ	-	-	-	-	-	-	-	-	-	-	-	-	-	-	-	-	-	-
	2406-02-110-0-47-ಐ.ಡಿ.ಡಬ್ಲ್ಯೂ.ಹೆಚ್.- -422-ವಿಶೇಷ ಘಟಕ ಯೋಜನೆ	-	-	-	-	-	-	-	89.00	89.00	-	88.99	88.99	97.40	146.11	243.51	88.65	130.15	218.799
	2406-02-110-0-47-ಐ.ಡಿ.ಡಬ್ಲ್ಯೂ.ಹೆಚ್.-423-ಗಿರಿಜನ ಉಪ ಯೋಜನೆ	-	-	-	-	-	-	-	-	-	-	-	-	75.73	113.60	189.33	68.69	99.34	168.033
	ಒಟ್ಟು :	**203.22**	**509.78**	**713.00**	**203.22**	**509.50**	**712.72**	**498.34**	**798.89**	**1,297.23**	**365.49**	**637.22**	**1,002.71**	**495.08**	**960.76**	**1,455.84**	**479.29**	**928.60**	**1,407.89**
	ಆನೆ ಯೋಜನೆ																		
3	2406-02-110-0-23-ಆನೆ ಯೋಜನೆ- -139-ಪ್ರಧಾನ ಕಾಮಗಾರಿಗಳು	206.21	309.30	515.51	206.21	302.22	508.43	247.56	366.62	614.18	245.36	366.62	611.98	220.27	489.84	710.11	220.27	489.80	710.069
	2406-02-110-0-23-ಆನೆ ಯೋಜನೆ- -034-ಹೊರ ಗುತ್ತಿಗೆ																		
	ಒಟ್ಟು :	**206.21**	**309.30**	**515.51**	**206.21**	**302.22**	**508.43**	**247.56**	**366.62**	**614.18**	**245.36**	**366.62**	**611.98**	**220.27**	**489.84**	**710.11**	**220.27**	**489.80**	**710.07**